ರಾಜ್ಯದಲ್ಲಿ ಗಾಳಿಯಂತ್ರಗಳ ಸ್ಥಾಪನೆ

105 : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಗಾಳಿ ಯಂತ್ರಗಳನ್ನು ಸ್ಥಾಪಿಸಿ ವಿದ್ಯುತ್ ಉತ್ಪಾದನೆ ಮಾಡುವ ಸಲುವಾಗಿ ಸರ್ವೆ ಕಾರ್ಯವನ್ನು ಸರ್ಕಾರದವರು ಮಾಡಿದ್ದಾರೆಯೇ ಹಾಗೂ ಆ ರೀತಿ ಈಗಾಗಲೇ ಗುರುತಿಸಿರುವ ಸ್ಥಳಗಳು ಯಾವುವು?

ಆ) ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಗಾಳಿ ಯಂತ್ರಗಳನ್ನು ಸ್ಥಾಪಿಸಿ ಎಷ್ಟು ವರ್ಷಗಳಾಗಿವೆ;

ಇ) ಈ ಬಗ್ಗೆ ವೆಚ್ಚವಾದ ಹಣದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು ಎಷ್ಟು?

ಈ) ಈ ಕಾಮಗಾರಿ ಸ್ಥಗಿತಗೊಂಡು ಎಷ್ಟು ವರ್ಷಗಳಾಗಿವೆ? ಅದಕ್ಕೆ ಕಾರಣವೇನು ಮತ್ತು ಇದನ್ನು ಪೂರ್ಣಗೊಳಿಸುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಇದುವರೆಗೆ ಗಾಳಿ ವಿದ್ಯುತ್ ಯಂತ್ರಗಳನ್ನು ಸ್ಥಾಪಿಸಲು ಸಾಮರ್ಥ್ಯವುಳ್ಳ ಈ ಕೆಳಕಂಡ ಸ್ಥಳಗಳನ್ನು ಗುರುತಿಸಲಾಗಿದೆ.

1. ಕಪ್ಪಟಗುಡ್ಡ, ಧಾರವಾಡ ಜಿಲ್ಲೆ
2. ಜೋಗಿಮಟ್ಟಿ ಚಿತ್ರದುರ್ಗ ಜಿಲ್ಲೆ
3. ಬಾಬಾ ಬುಡನಗಿರಿ ಚಿಕ್ಕಮಗಳೂರು ಜಿಲ್ಲೆ
4. ಮಾಲಗಟ್ಟಿ ರಾಯಚೂರು ಜಿಲ್ಲೆ
5. ಹನುಮಸಾಗರ ರಾಯಚೂರು ಜಿಲ್ಲೆ
6. ಬೊಮ್ಮನಹಳ್ಳಿ ತುಮಕೂರು ಜಿಲ್ಲೆ
7. ಹನುಮನ ಹಟ್ಟಿ ತುಮಕೂರು ಜಿಲ್ಲೆ
8. ಗೋಕಾಕ್ ಹಿಲ್ಸ್, ಬೆಳಗಾಂ.

ಆ) 6 ವರ್ಷಗಳು

ಇ) ಈವರೆಗೂ ಆಗಿರುವ ವೆಚ್ಚ : 75.50 ಲಕ್ಷ ರೂ.ಗಳು 60.50 ಲಕ್ಷ ರೂ.ಗಳು (ಕೇಂದ್ರದ ಪಾಲು) 15.18 ಲಕ್ಷ ರೂ.ಗಳು (ರಾಜ್ಯದ ಪಾಲು)

ಈ) ಈ ಗಾಳಿ ಯಂತ್ರಗಳು ಸ್ಥಗಿತಗೊಂಡು 5 ವರ್ಷಗಳಾಗಿವೆ. ಈ ವಿದ್ಯುತ್ ಯೋಜನೆಯ ಕಾರ್ಯವನ್ನು ವಹಿಸಿಕೊಟ್ಟಿದ್ದ ಸಂಸ್ಥೆಯಾದ ಜಿ.ಕೆ. ಸಿಂಥೆಟಿಕ್ಸ್ ಇವರು ಘಟಕಗಳನ್ನು ಸರಿಯಾದ ರೀತಿಯಲ್ಲಿ ಕಾರ್ಯಪ್ರವೃತ್ತಿ ಮಾಡುವ ದಿಸೆಯಲ್ಲಿ ವಿಫಲವಾದ್ದರಿಂದ ಈ ಘಟಕಗಳು ಸ್ಥಗಿತಗೊಂಡವು. ಈ 1993ನೆಯ ಇಸವಿಯಿಂದ ಈ ಕೆಲಸದ ಹೊಣೆ ಹೊತ್ತಿದ್ದ ಕೆ.ಎಸ್.ಐ.ಐ.ಡಿ.ಸಿ. ಸಂಸ್ಥೆಯು ಈ ಘಟಕಗಳು ಪುನಃ ಕಾರ್ಯರಂಭ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ವಿಫಲವಾದ, ಈ ಯೋಜನೆಯ ಪ್ರಮುಖ ಗುತ್ತಿಗೆದಾರರಾದ ಮೆ: ಜಿ.ಕೆ. ಸಿಂಥಟಿಕ್ಸ್ ಸಂಸ್ಥೆಯ ವಿರುದ್ಧ ನ್ಯಾಯಾಲಯದಲ್ಲಿ ಖಟ್ಲೆಯನ್ನು ಕೆ.ಎಸ್.ಐ.ಐ.ಡಿ.ಸಿ. ಸಂಸ್ಥೆಯು ಹೂಡಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಯಾವುದೇ ಪರಿಸರದ ಮೇಲೆ ಹಾನಿಯಾಗದೇ ಇರತಕ್ಕ, ಹಣ ಕೂಡ ಕಡಿಮೆಯಾಗತಕ್ಕ ಈ ರಾಜ್ಯದಲ್ಲಿ ವಿದ್ಯುತ್ತಿನ

ಬರಗಾಲ ಇರುವ ಈ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಇಂತಹ ಅನೇಕ ಘಟಕಗಳನ್ನು ಸ್ಥಾಪನೆ ಮಾಡಬಹುದು ಎಂದು ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಸರ್ವೆ ಮಾಡಿಸಿರತಕ್ಕ ಸ್ಥಳಗಳನ್ನು ಗುರುತಿಸಿ ಹೇಳಿದ್ದಾರೆ. ಈ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಳ್ಳುವುದಕ್ಕೆ ಏನು ತೊಂದರೆ ಉಂಟು? ಆಮೇಲೆ ಈ ದೇಶದ ಜನರ ಹಣ ಸುಮಾರು 65 ಲಕ್ಷ ರೂಪಾಯಿಗಳನ್ನು ಹಾಕಿ ವ್ಯಯ ಮಾಡಿ ಈಗಾಗಲೇ 5 ವರ್ಷಗಳಾಗಿವೆ. ಆ ಹಣ ಐಡ್ಲ್ ಆಗಿ ಹಾಗೆಯೇ ಬಿದ್ದಿದೆ. ಅದರಿಂದ ವಿದ್ಯುತ್ ಉತ್ಪಾದನೆ ಯಾವುದೂ ಇಲ್ಲ. ಕೋರ್ಟಿಗೆ ಯಾವುದೋ ಹೋಗಿದ್ದೇವೆ ಎಂದು ಹೇಳುತ್ತಾರೆ. ಅದನ್ನು ತತ್‌ಕ್ಷಣ ಪರಿಹಾರ ಮಾಡಿ, ಆ ಘಟಕಗಳು ಕಾರ್ಯಾರಂಭ ಮಾಡುವುದಕ್ಕೆ ಏನು ತೊಂದರೆ ಉಂಟು ಎನ್ನುವಂತಹದ್ದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಜೊತೆಗೆ ತಮಿಳುನಾಡು ಹಾಗೂ ಗುಜರಾತಿನಲ್ಲಿ ಈ ಗಾಳಿ ಯಂತ್ರಗಳನ್ನು ಸ್ಥಾಪನೆ ಮಾಡಿ ಸುಮಾರು 100 ಮೆಗಾವಾಟ್ ಗಿಂತ ಹೆಚ್ಚು ವಿದ್ಯುತ್ತು ಉತ್ಪಾದನೆ ಮಾಡಿ, ಈ ದೇಶದಲ್ಲೇ ನಮ್ಮ ಪಕ್ಕದ ರಾಜ್ಯಗಳು ಈ ರೀತಿಯ ಸೌಲಭ್ಯಗಳನ್ನು, ಪ್ರಾಕೃತಿಕವಾಗಿರುವಂತಹ ಈ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಆಯಾ ರಾಜ್ಯದ ವಿದ್ಯುತ್ತಿನ ಕ್ಷಾಮವನ್ನು ನೀಗಿಸುತ್ತಿರುವಂತಹ ಈ ಸಂದರ್ಭದಲ್ಲಿ, ನಮ್ಮ ರಾಜ್ಯ ತ್ವರಿತವಾಗಿ ಈ ಕೆಲಸವನ್ನು ಏಕೆ ಮಾಡುವುದಿಲ್ಲ? ಏಕೆ ಇನ್ನೂ ಕೂಡ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ? ಯಾವಾಗ ಇದನ್ನು ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಜೆ.ಎಚ್. ಪಟೇಲ್ : ಗಾಳಿ ಯಂತ್ರದಿಂದ ವಿದ್ಯುತ್ತನ್ನು ಉತ್ಪಾದನೆ ಮಾಡಬೇಕು ಎನ್ನುವ ಸಲಹೆ ಸೂಕ್ತವಾದುದು. ಪರಿಸರದ ಮಾಲಿನ್ಯ ಇಲ್ಲ. ಅದರಿಂದ ಹಲವಾರು ಸಮಸ್ಯೆಗಳು ತಾನಾಗಿ ಉದ್ಭವಿಸುವುದಿಲ್ಲ. ಆದರೆ ವಾಸ್ತವಿಕವಾಗಿ ಗಾಳಿ ಯಂತ್ರದಿಂದ ಜಗತ್ತಿನಲ್ಲಿ ವಿದ್ಯುತ್ ಉತ್ಪಾದನೆಯ ದಿಕ್ಕಿನಲ್ಲಿ ಬಹಳ ಸಮರ್ಥವಾಗಿ ವಿದ್ಯುತ್ ಉತ್ಪಾದನೆ ಮಾಡಿರತಕ್ಕ ಕ್ಯಾಲಿಫೋರ್ನಿಯಾದ ಒಂದು ಕಂಪನಿ ಬಿಟ್ಟರೆ, 400 ಮೆಗಾವಾಟ್ ಅದೊಂದು ಉತ್ಪಾದನೆ ಮಾಡುತ್ತಿದೆ. ಇನ್ನೆಲ್ಲಾ ಕಡೆ ಔದ್ಯೋಗಿಕ ಅವಶ್ಯಕತೆಗೆ ಬೇಕಾಗುವಷ್ಟು ವಿದ್ಯುತ್ತನ್ನು ಗಾಳಿ ಯಂತ್ರದಿಂದ ಉತ್ಪಾದನೆ ಮಾಡತಕ್ಕಂತಹದ್ದು ಯಾರ ಕೈಯಲ್ಲೂ ಆಗಿಲ್ಲ. ಈಗ ನಮ್ಮದು ಇಡೀ ರಾಜ್ಯದಲ್ಲಿ ಸಾಧ್ಯತೆ ಇರುವುದು 100 ಮೆಗಾವಾಟ್. ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ ಕೊಟ್ಟಿದ್ದೇವೆ. ಹಿಂದೆ ಅವರಿಗೆ ಕೊಟ್ಟಿವು ಅವರು ಮಾಡಲಿಲ್ಲ. ಅವರು ಮಾಡಲಿಲ್ಲ ಎಂದು ನಾವು ಹಾಗೆ ಕೈಬಿಡಲಿಲ್ಲ. ಕರ್ನಾಟಕ ಪವರ್ ಕಾರ್ಪೊರೇಷನ್ ನಿಂದ ಕಪ್ಪದ ಗುಡ್ಡದಲ್ಲಿ 2 ಒಟ್ಟು 5 ಘಟಕಗಳನ್ನು ಮಾಡಿದ್ದೇವೆ. ಅದರಲ್ಲಿ 2 ಕೆಲಸ ಮಾಡುತ್ತಿದ್ದಾವೆ. ಆ ಎರಡು ಘಟಕಗಳಿಂದ ಬರಬಹುದಾದಂತಹ ಒಟ್ಟು ಒಂದು ವರ್ಷಕ್ಕೆ 100 ಯೂನಿಟ್‌ಗಳು. ಆದ್ದರಿಂದ ಇದು ವಿಚಾರಾರ್ಥವಾಗಿ ಸರಿ. ನಾನು ಅಲ್ಲಗಳೆಯುವುದಿಲ್ಲ. ಆದರೆ ವಾಸ್ತವಿಕವಾಗಿ ಗಾಳಿಯಂತ್ರದಿಂದ ಬರತಕ್ಕ ವಿದ್ಯುತ್ ಉತ್ಪಾದನೆಯಿಂದ ಔದ್ಯೋಗಿಕವಾಗಿ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ಆಗಲೇ ಕರ್ನಾಟಕ ಪವರ್ ಕಾರ್ಪೊರೇಷನ್ ಸ್ಥಳಗಳನ್ನು ಗುರುತಿಸಿದೆ. ಒಂದು ಕಡೆ ನಾವೇ ಮಾಡುತ್ತಿದ್ದೇವೆ. ಬೇರೆ ಕಡೆ ಪ್ರೈವೇಟ್ ಏಜೆನ್ಸಿಗಳು ಬಂದಿದ್ದಾವೆ. ಅವರಿಗೆ ನಾವು ಕೊಡುತ್ತಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗ್ಗಡೆ : ಕರ್ನಾಟಕ ಪವರ್ ಕಾರ್ಪೊರೇಷನ್‌ನಿಂದ ನಾವು ಈ ಗಾಳಿಯಂತ್ರದ ಮೂಲಕ ವಿದ್ಯುತ್ ಉತ್ಪಾದನೆ ಮಾಡುತ್ತೇವೆ ಎಂದು ಹೇಳುವುದು ಈ ಸದನಕ್ಕೆ ಬಹುಶಃ ಇಷ್ಟು ವರ್ಷಗಳ ಹಿಂದಿನ ಅನುಭವದಲ್ಲಿ ತಪ್ಪು ಹೇಳಿದಂತೆ ಆಗುತ್ತದೇನೊ ಎಂಬುದಾಗಿ ನನಗನ್ನಿಸುತ್ತಿದೆ. ಆದರೆ ಇದಕ್ಕೆ ತಕ್ಕಂತೆ ಕರ್ನಾಟಕ ಪವರ್ ಕಾರ್ಪೊರೇಷನ್ ಬಿಟ್ಟು ಪರ್ಯಾಯ ಇಂಧನದ ಮೂಲಗಳನ್ನು ಹುಡುಕುವುದಕ್ಕೆ ಸರ್ಕಾರ ಏನಾದರೂ ಯೋಚನೆ ಮಾಡುವುದು ಬಹಳ ಮುಖ್ಯವಾದುದು ಎಂಬುದಾಗಿ ನನಗನ್ನಿಸುತ್ತದೆ.

ಅಧ್ಯಕ್ಷರು : ಅದು ಬೇರೆ ಪ್ರಶ್ನೆಯೇ ಆಗುತ್ತದೆ. ಆದರೆ ಸಲಹೆ ಬಹಳ ಉತ್ತಮವಾದುದಾಗಿದೆ. ನೀವು ಯಾವಾಗಲಾದರೂ ಮಾನ್ಯ ಮಂತ್ರಿಗಳನ್ನು ಮಿಟ್ ಮಾಡಿ ಡಿಸ್‌ಕಸ್ ಮಾಡಿ. It is a good suggestion.

ಅಧ್ಯಕ್ಷರು : ಎರಡನ್ನೂ ಒಟ್ಟಿಗೇ ಕೇಳಿ. ಮಂತ್ರಿಗಳು ಉತ್ತರ ಕೊಡುತ್ತಾರೆ.

ಮಂಡ್ಯ ಜಿಲ್ಲೆಯ ರಸ್ತೆಗಳ ದುರಸ್ತಿ

20 : ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಎಲ್ಲಾ ರಸ್ತೆಗಳು ಬಹಳ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಂತಹ ರಸ್ತೆಗಳನ್ನು ದುರಸ್ತಿ ಪಡಿಸಲು ಸರ್ಕಾರದವರು ಯಾವುದಾದರೂ ವಿಶೇಷ ಕಾರ್ಯಕ್ರಮವನ್ನು ರೂಪಿಸಿದೆಯೇ;

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿರುವ 1057 ಕಿ.ಮೀ. ಉದ್ದದ ರಸ್ತೆಗಳು ವಾಹನ ಸಂಚಾರಕ್ಕೆ ಅಡಚಣೆ ಆಗುವಷ್ಟು ಕೆಟ್ಟಿರುವುದಿಲ್ಲ, ಆದರೆ ಕೆಲಭಾಗದಲ್ಲಿ ಕೆಟ್ಟಿರುತ್ತದೆ.

ಆ) ಪ್ರಸಕ್ತ ಈ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಇರುವ ಪ್ರದೇಶದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿಗಾಗಿ ಅತಿ ಅಗತ್ಯವಿರುವ ಕಡೆ ರಸ್ತೆಯ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ. ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳ ಪ್ರದೇಶ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ವಿಶೇಷವಾಗಿ ಅಭಿವೃದ್ಧಿ ಪಡಿಸುವುದಕ್ಕೂ ಸಹ ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಿ, ರಸ್ತೆಯ ಅಭಿವೃದ್ಧಿ ಕ್ರಮವನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ರಸ್ತೆಗಳ ದುರಸ್ತಿ

20ಎ - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಶ್ರೀ ಜಿ.ಬಿ. ಶಿವಕುಮಾರ್ (ಕೆರೆಗೋಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಸೇರಿದ ರಸ್ತೆಗಳು ಬಹಳ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಇಂತಹ ರಸ್ತೆಗಳನ್ನು ದುರಸ್ತಿಪಡಿಸಲು ಸರ್ಕಾರ ಯಾವುದಾದರೂ ವಿಶೇಷ ಕಾರ್ಯಕ್ರಮವನ್ನು ರೂಪಿಸಿದೆಯೇ?*

ಶ್ರೀ ಶಿವಾನಂದ ಹೆಚ್ ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೇರಿರುವ 2939 ಕಿ.ಮೀ. ಉದ್ದದ ರಸ್ತೆಗಳು ವಾಹನ ಸಂಚಾರಕ್ಕೆ ಅಡಚಣೆಯಾಗುವಷ್ಟು ಕೆಟ್ಟಿರುವುದಿಲ್ಲ, ಆದರೆ ಕೆಲಭಾಗದಲ್ಲಿ ಕೆಟ್ಟಿರುತ್ತದೆ.